## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 377

ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 13.08.2025

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಘಟಕವಿದ್ದು, ಸದರಿ ಘಟಕದಲ್ಲಿ 98 ಬಸ್ಸುಗಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಅವುಗಳು ತುಂಬಾ ಹಳೆಯ ವಾಹನಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಿಗಮದ ವ್ಯಾಪ್ತಿಯ ಸಿಂಧನೂರು ಘಟಕದಲ್ಲಿ 99 ಬಸ್ಸುಗಳಿಂದ 93 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಘಟಕಕ್ಕೆ 2023-24 ಹಾಗೂ 2024-25 ಸಾಲಿನಲ್ಲಿ ಒಟ್ಟು 24 ಹೊಸ ಬಸ್ಸುಗಳನ್ನು ನೀಡಲಾಗಿರುತ್ತದೆ. |
| ಆ) | ಸಿಂಧನೂರು ವಿಧಾನ ಸಭಾ ಕ್ಷೇತ್ರದಲ್ಲಿ ಸುಮಾರು 3 ಲಕ್ಷಕ್ಕೂ ಅಧಿಕ ಜನಸಂಖ್ಯೆಯಿದ್ದು, ಇವರ ದಿನನಿತ್ಯ ಬೇರೆ ಬೇರೆ ಸ್ಥಳಗಳಿಗೆ ಪ್ರಯಾಣ ಮಾಡಲು ಸರ್ಕಾರಿ ವಾಹನಗಳನ್ನೆ ಅವಲಂಭಿಸಿದ್ದು, ಬಸ್ಸುಗಳ ಸಂಖ್ಯೆ ಕಡಿಮೆ ಇರುವುದರಿಂದ ಹೆಚ್ಚುವರಿಯಾಗಿ ಬಸ್ಸುಗಳನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? | 2023-24ರಿಂದ ಈವರೆಗೆ ಅವಧಿ ಮೀರಿದ / ನಿಗಧಿಪಡಿಸಲಾದ ಸಾಮರ್ಥ್ಯ ಮೀರಿದ ಒಟ್ಟು 09 ಬಸ್ಸುಗಳನ್ನು ಹಿಂಪಡೆದು ನಿರುಪಯುಕ್ತಗೊಳಿಸಲಾಗಿದ್ದು, ಕಾಲಕಾಲಕ್ಕೆ ಅವಧಿ ಮೀರಿದ / ನಿಗಧಿಪಡಿಸಲಾದ ಸಾಮರ್ಥ್ಯ ಮೀರಿದ ಬಸ್ಸುಗಳನ್ನು ಹಿಂಪಡೆದು ನಿರುಪಯುಕ್ತಗೊಳಿಸಲಾಗುತ್ತಿದೆ.<br><br>ನಿಗಮದ ಆರ್ಥಿಕ ಸ್ಥಿತಿಗತಿ ಪರಿಗಣಿಸಿ 2025-26ನೇ ಸಾಲಿನಲ್ಲಿ ಹೊಸ ಬಸ್ಸುಗಳನ್ನು ಖರೀದಿಸಲು ಯೋಜಿಸಲಾಗಿದ್ದು, ಹೊಸ ಬಸ್ಸುಗಳ ಖರೀದಿಸಿದ ನಂತರ ಘಟಕದ ಅವಶ್ಯಕತೆಗನುಗುಣವಾಗಿ ಬಸ್ಸುಗಳನ್ನು ಒದಗಿಸಲು ಆದ್ಯತೆಯ ಮೇರೆಗೆ ಕ್ರಮವಹಿಸಲಾಗುವುದು. |

ಸಂಖ್ಯೆ: ಟಿಡಿ 155 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು